## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **757** |
| ವಿಧಾನ ಪರಿಷತ್ತು ಸದಸ್ಯರು | ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 21.02.2024 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆ ಗಳಲ್ಲಿ ಎಷ್ಟು ಕಂದಾಯ ಗ್ರಾಮಗಳಿವೆ; | ಭೂದಾಖಲೆಗಳ ಪ್ರಕಾರ ಕಲಬುರಗಿ ಜಿಲ್ಲೆಯಲ್ಲಿ ಒಟ್ಟು **1,115** ಮತ್ತು ಯಾದಗಿರಿ ಜಿಲ್ಲೆಯಲ್ಲಿ **597** ಕಂದಾಯ ಗ್ರಾಮಗಳಿವೆ. ಇದಲ್ಲದೇ ದಾಖಲೆರಹಿತ ಇರುವ ಕಂದಾಯ ಗ್ರಾಮಗಳು ಕಲಬುರಗಿ ಜಿಲ್ಲೆಯಲ್ಲಿ **319** ಹಾಗೂ ಯಾದಗಿರಿ ಜಿಲ್ಲೆಯಲ್ಲಿ **12** ಗ್ರಾಮಗಳೆಂದು ಗುರುತಿಸಲಾಗಿದೆ. |
| ಆ) | ಈ ಎಲ್ಲಾ ಗ್ರಾಮಗಳು ಸರ್ಕಾರದ ನಿಯಮದಂತೆ ಪೋಡಿ ಮುಕ್ತ ಗ್ರಾಮ ಗಳಾಗಿವೆಯೇ; ಇಲ್ಲದಿದ್ದಲ್ಲಿ, ಕಾರಣ ವೇನು; | ಕಲಬುರಗಿ ಜಿಲ್ಲೆಯ ಒಟ್ಟು **1,115** ಗ್ರಾಮಗಳ ಪೈಕಿ, **460** ಗ್ರಾಮಗಳಲ್ಲಿ **56,592** ಬ್ಲಾಕುಗಳ ಅಳತೆ ಮತ್ತು **56,489** ಬ್ಲಾಕುಗಳ ದುರಸ್ತಿ ಕಾರ್ಯ ಪೂರೈಸಿ **56,247** ಏಕಮಾಲೀಕತ್ವದ ಪಹಣಿಗಳನ್ನು ಸೃಜಿಸಲಾಗಿದೆ. ಇನ್ನು **518** ಗ್ರಾಮಗಳು ಪೋಡಿ ಮುಕ್ತ ಗ್ರಾಮ ಯೋಜನೆಯಡಿ ಅಳತೆ ಮಾಡಲು ಬಾಕಿಯಿರುತ್ತವೆ. ಇವುಗಳನ್ನು ಹಂತ ಹಂತವಾಗಿ ನಿರ್ವಹಿಸಲಾಗುವುದು. |
| ಇ) | ಇದುವರೆವಿಗೂ ಎಷ್ಟು ಗ್ರಾಮಗಳನ್ನು ಪೋಡಿ ಮುಕ್ತ ಗ್ರಾಮಗಳೆಂದು ಘೋಷಿಸಲಾಗಿದೆ; | |
| ಈ) | ಎಷ್ಟು ಗ್ರಾಮಗಳನ್ನು ಪೋಡಿ ಮುಕ್ತ ಗ್ರಾಮಗಳೆಂದ ಘೋಷಿಸದಿರಲು ಕಾರಣಗಳೇನು? (ವಿವರ ನೀಡುವುದು) | ಯಾದಗಿರಿ ಜಿಲ್ಲೆಯ ಒಟ್ಟು **597** ಗ್ರಾಮಗಳ ಪೈಕಿ, **210** ಗ್ರಾಮಗಳಲ್ಲಿ **32,611** ಬ್ಲಾಕುಗಳ ಅಳತೆ ಮತ್ತು **32,611** ಬ್ಲಾಕುಗಳ ದುರಸ್ತಿ ಕಾರ್ಯ ಪೂರೈಸಿ **32,611** ಏಕ ಮಾಲೀಕತ್ವದ ಪಹಣಿಗಳನ್ನು ಸೃಜಿಸಲಾಗಿದೆ. ಇನ್ನು **387** ಗ್ರಾಮಗಳು ಪೋಡಿ ಮುಕ್ತ ಗ್ರಾಮ ಯೋಜನೆಯಡಿ ಅಳತೆ ಮಾಡಲು ಬಾಕಿಯಿರುತ್ತವೆ. ಇವುಗಳನ್ನು ಸಹ ಹಂತ ಹಂತವಾಗಿ ನಿರ್ವಹಿಸಲಾಗುವುದು.<br><br>ಈ ಹಿಂದೆ ಸದರಿ ಯೋಜನೆಯಲ್ಲಿ ಗ್ರಾಮಗಳ ಹಂಚಿಕೆ ಮತ್ತು ಕಡತಗಳ ನಿರ್ವಹಣೆ ಹಾಗೂ ಪರವಾನಗಿ ಭೂಮಾಪಕರ ಸಂಭಾವನೆಯ ವಿತರಣೆ ಇತ್ಯಾದಿ ಕಾರ್ಯಗಳನ್ನು ಭೌತಿಕವಾಗಿ ನಿರ್ವಹಿಸಲಾಗುತ್ತಿತ್ತು. ಈ ಕಾರ್ಯದಲ್ಲಿ ವಿಳಂಬ ವಾಗುತ್ತಿದ್ದರಿಂದ ಪ್ರಸ್ತುತ ಮಾಹೆ **ಅಕ್ಟೋಬರ್-2022** ರಿಂದ ಇಲಾಖೆಯಲ್ಲಿ ಪೋಡಿ ಮುಕ್ತ ಅಭಿಯಾನ ಯೋಜನೆಯನ್ನು ಮೋಜಿಣಿ ತಂತ್ರಾಂಶದ ಮುಖಾಂತರ ನಿರ್ವಹಿಸಲಾಗುತ್ತಿದೆ.<br><br>ಮೋಜಿಣಿ ತಂತ್ರಾಂಶದ ಮುಖಾಂತರ ಸಾರ್ವಜನಿಕರು ಸಲ್ಲಿಸುವ 11ಇ, ಅನ್ಯಕ್ರಾಂತ, ತತ್ಕಾಲ್ ಪೋಡಿ, ಹದ್ದುಬಸ್ತು, ಇತ್ಯಾದಿ ಅರ್ಜಿಗಳು ಹಾಗೂ ತಾಲ್ಲೂಕುಗಳಲ್ಲಿ ಬರುವ ಸ್ಥಳೀಯ ತೊಂದರೆಗಳ ಬಗ್ಗೆ ಅಳತೆ ಕಾರ್ಯಗಳಿಗೆ ಮೊದಲ ಆದ್ಯತೆ ನೀಡಿ ಲಭ್ಯ ಭೂಮಾಪಕರುಗಳನ್ನು ಬಳಸಿಕೊಂಡು |

| | | |
|---|---|---|
| | | ಪೋಡಿ ಮುಕ್ತ ಗ್ರಾಮ ಯೋಜನೆಯಡಿ ಅಳತೆ ಕಾರ್ಯ ನಿರ್ವಹಿಸಲಾಗುತ್ತಿದೆ. ಯಾವ ಗ್ರಾಮಗಳನ್ನು ಈ ಯೋಜನೆಯಿಂದ ಬಿಡುವ ಉದ್ದೇಶವಿರುವುದಿಲ್ಲ. ಜಿಲ್ಲೆಯ ಎಲ್ಲಾ ಗ್ರಾಮಗಳಲ್ಲಿಯೂ ಇಂತಹ ಪ್ರಕರಣಗಳ ಬಾಬ್ತು ಪೋಡಿ ಕೆಲಸ ನಿರ್ವಹಿಸಲಾಗುವುದು.<br><br>ಪ್ರಸ್ತುತ ಮೋಜಿಣಿ ತಂತ್ರಾಂಶದ ಮುಖಾಂತರ ಕಲಬುರಗಿ ಜಿಲ್ಲೆ ವ್ಯಾಪ್ತಿಯಲ್ಲಿ ಬಾಕಿಯಿರುವ 655 ಗ್ರಾಮಗಳ ಪೈಕಿ **173** ಗ್ರಾಮಗಳಲ್ಲಿ ಮತ್ತು ಯಾದಗಿರಿ ಜಿಲ್ಲೆ ವ್ಯಾಪ್ತಿಯಲ್ಲಿ ಬಾಕಿಯಿರುವ 387 ಗ್ರಾಮಗಳ ಪೈಕಿ **133** ಗ್ರಾಮಗಳಲ್ಲಿ ಪೋಡಿ ಮುಕ್ತ ಗ್ರಾಮ ಯೋಜನೆಯಡಿ ಅಳತೆ ಕಾರ್ಯ ಪ್ರಗತಿಯಲ್ಲಿರುತ್ತದೆ. |

**ಸಂಖ್ಯೆ: ಕಂಇ 41 ಎಸ್‌ಎಸ್‌ಸಿ 2024**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು